# ಶಾಸ್ತ್ರಸರಣಿ ದಾಸವಾಣಿ
# ಭಾಗ-೪

**"ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ"** ಎಂಬ ಪ್ರಥಮ ಸೂತ್ರದಿಂದ ಅಧಿಕಾರಿಗಳು ವಿಷ್ಣು ವಿಷಯಕ ಜಿಜ್ಞಾಸ (ಅಂದರೆ ಶ್ರವಣ, ಮನನ, ನಿದಿ ಧ್ಯಾನಾದಿಗಳನ್ನು) ಮಾಡೋಣದರಿಂದ. ಪರಮಾತ್ಮನ ಪ್ರಸಾದ ದ್ವಾರ, ಸ್ವರೂಪಾನಂದಾವಿರ್ಭಾವ ರೂಪವಾದ ಮೋಕ್ಷವನ್ನು ಹೊಂದುವರೆಂದು ತಿಳಿಯುತ್ತದೆ. ಆದ್ದರಿಂದ ಶ್ರವಣ ಮನನಾದಿಗಳು ಅಧಿಕಾರಿಗಳ ಕರ್ತವ್ಯ.

ಹೀಗೆಯೇ ಶ್ರವಣಾದಿಗಳನ್ನು ಮಾಡುತ್ತ ಮಾಡುತ್ತ ಕೆಲವು ಕಾಲಾ ನಂತರ ಶ್ರೀವಿಷ್ಣುವು ಬ್ರಹ್ಮಾಂಡದಲ್ಲಿ ಸರ್ವತ್ರ ವ್ಯಾಪ್ತನೆಂದೂ ಮತ್ತು ಅವ್ಯಕ್ತನಾಗಿರುವನೆಂದೂ ತಿಳಿಯುತ್ತದೆ. ಅವನ ಸರ್ವದಾ ವ್ಯಕ್ತಸ್ಥಾನಗಳು ಮೂರು. ಶ್ವೇತ ದ್ವೀಪ, ಅನಂತಾಸನ ಮತ್ತು ವೈಕುಂಠಗಳೆಂದು ತ್ರಿಧಾಮಗಳು. ಈ ಸ್ಥಳಗಳಲ್ಲಿ ಪರಮಾತ್ಮ ಲಕ್ಷ್ಮೀ ಮತ್ತು ಮುಕ್ತರುಗಳ ವಾಸ. ಸ್ಮೃತಿಗಳಲ್ಲಿ ಬರತಕ್ಕ ಖಗೋಳ, ಭೂಗೋಳ ವರ್ಣನೆಗಳ ಪ್ರಕಾರ ಈ ಸ್ಥಳಗಳು ಕೋಟ್ಯಾಂತರ ಯೋಜನೆ ದೂರದಲ್ಲಿವೆ. ಆ ಸ್ಥಳಗಳಿಂದ ಮುಕ್ತರು ಬೇರೆ ಬೇರೆ ಲೋಕಗಳಿಗೆ ಸ್ವೇಚ್ಛಾ ಸಂಚಾರ ಮಾಡುತ್ತಾರೆ, ಪುನಃ ಸ್ವಸ್ಥಾನಗಳಿಗೆ ಹೋಗುತ್ತಾರೆ. ಅವರಿಗೆ ಹೊರಗೆ ಹೋಗಲು ಮತ್ತು ಒಳಗೆ ಬರಲು ಯಾವ ನಿರ್ಬಂಧವೂ ಇಲ್ಲ. ಆದರೆ ಅಮುಕ್ತರು ಮಾತ್ರ ಆ ಮುಕ್ತ ಸ್ಥಾನಗಳಿಗೆ ಹೋಗುವಂತಿಲ್ಲ.

ಕೆಲವು ಸಾರಿ ದೈತ್ಯರು ವರ ಬಲದಿಂದ ಉದ್ಭಟರಾದರೆ, ಲೋಕಗಳನ್ನು ಅತಿಯಾಗಿ ಪೀಡಿಸಿದರೆ, ಬ್ರಹ್ಮಾದಿ ದೇವತೆಗಳು

ಈ ತ್ರಿಧಾಮಗಳಲ್ಲೊಂದಕ್ಕೆ ಹೋಗಿ ಬಹಿರ್ಭಾಗದಲ್ಲಿಯೇ, ಅಂದರೆ ಅಮುಕ್ತ ಸ್ಥಾನದಲ್ಲಿಯೇ ನಿಂತು, ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ. ಅಲ್ಲಿಯೇ ಅವರಿಗೆ ದರ್ಶನಕೊಟ್ಟು ಲೋಕಗಳಲ್ಲಿ ಆಗತಕ್ಕ ಕಷ್ಟನಷ್ಟಗಳನ್ನು ತಿಳಿಸಿದಾಗ ತಾನೇ ಭೂಲೋಕದಲ್ಲಿ ಅವತಾರ ಮಾಡುವುದಾಗಿ ತಿಳಿಸುತ್ತಾನೆ. ದುಷ್ಟಶಿಕ್ಷಾ, ಸಜ್ಜನೋದ್ಧಾರ, ಧರ್ಮಸಂರಕ್ಷಣ ಮಾಡುವದಾಗಿ ಅವನ ಸಂಕಲ್ಪ. ಪರಮಾತ್ಮನ ಈ ನಿರ್ಧಾರ ಅವನ ವಾಣಿಯಿಂದಲೇ ಖಚಿತವಾಗುತ್ತವೆ. **"ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ|ಅಭ್ಯುಥ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ||".**

ಜಗತ್ತಿಗೆ, ಮಾತಾ, ಪಿತಾ, ರಕ್ಷಕ, ಗುರು, ಮೋಕ್ಷದಾತಾ, ಕರುಣಾ ಸಮುದ್ರ ಇತ್ಯಾದಿಗಳಾಗಿ ("ಹರಿರೇವ ಪರೋ ಹರಿರೇವ ಗುರು ಹರಿರೇವ ಜಗತ್ ಪಿತೃಮಾತೃ ಗತಿಃ")ಅವನ ಸಂಬಂಧ. ಶೃತಿ, ಸ್ಮೃತಿಗಳನ್ನು ಚಿರಕಾಲ ಶ್ರವಣಮಾಡಿ ಪರಮಾತ್ಮನ ನಿರ್ವ್ಯಾಜ ಸಂಬಂಧ ಅನಿಮಿತ್ತೋಪಕಾರಗಳನ್ನು ತಿಳಿದಮೇಲೆ ಅವನನ್ನು ಕಾಣಬೇಕೆಂಬ ಹಂಬಲವುಂಟಾಗುತ್ತದೆ. ಇಂಥ ಆಶೆ ಆಕಾಂಕ್ಷಗಳನ್ನು ಬಹುಕಾಲ ತಡೆಯಬೇಕಾಗುತ್ತದೆ. ಆಪತ್ತು ವಿಪತ್ತುಗಳಲ್ಲಿ, ತಾಳ್ಮೆಮೀರಿ ಭಾಧೆ ಒದಗಿದಾಗ ಪರಮಾತ್ಮನು ಕೋಟಿ ಯೋಜನ ದೂರವಿರುವದು ಸಹಿಸದು, ಭಕುತರಿಗೆ ಅಷ್ಟು ದೂರದಿಂದ ಪರಮಾತ್ಮ ತನ್ನ ಕೆಲಸ ಬಿಟ್ಟು ನಮಗೋಸ್ಕರ ಬರುವನೇ? ನಮ್ಮಂತೆ ಎಷ್ಟೋ ಜನ ಕೂಗುತ್ತಲೇ ಇರುತ್ತಾರೆ.

ಬಹು ಜನರ ಅನುಭವದಲ್ಲಿರುವ ವಿಷಯವೆಂದರೆ, ತೀವ್ರರೋಗದಿಂದ ಆರ್ತರಾಗಿ ಬಳಲುವ ರೋಗಿಗಳನ್ನು ನೋಡಿ ವೈದ್ಯರಿಗೆ ಅಭ್ಯಾಸವಾಗಿ ಬಿಡುತ್ತದೆ. ಅವರು ಯಾವ

ಪ್ರಕ್ರಿಯೆಯನ್ನೂ ತೋರುವದೂ ಇಲ್ಲ; ತೀವ್ರ ನೋಡುವದೂ ಇಲ್ಲ. ಅವರದೂ ಒಂದು ದೊಡ್ಡ ಸರತಿಯ ಸಾಲು (Queue). ಪರಮಾತ್ಮನು ಹೀಗಲ್ಲ. ಒಂದೊಂದು ಸಲ ತೀವ್ರಭವಭಾಧೆ ಆವರಿಸಿದಾಗ ದಿಕ್ಕು ತೋಚದ ಅನಿಸಿಕೆಗಳು. ಕೇಳಿಸಿತೋ ಇಲ್ಲವೋ? ಒದಗುವನೋ? ತಡವಾಗಿವದೋ? ಅನೇಕ ಹೊಯ್ದಾಟಗಳು ನಮ್ಮ ಮನಸ್ಸನ್ನು ಮುತ್ತುತ್ತಿವೆ.

ಹೀಗೆ ಅನೇಕ ಆಕಾಂಕ್ಷೆ, ನಿರಾಶೆ, ಕಾತರ, ಕಳವಳ, ಅಪನಂಬಿಕೆ, ಸಂದೇಹ ಇತ್ಯಾದಿಗಳಿಂದ ಮನೋವ್ಯಾಕುಲವಾದಾಗ, ಆಯೊತು ದಾಸರಾಯರ ದರ್ಶನ. ಇಂಥ ವಿಚಿತ್ರ ಸ್ಥಿತಿಗೀಡಾದ ಮನೋಖಿನ್ನತೆಯನ್ನು ತಿಳಿಸಿದ ಮೇಲೆ, ದಾಸರು ಸಂದೇಹ ಪರಿಹಾರಕವಾದ ಒಂದು ಆಶ್ವಾಸನೆ ನೀಡುತ್ತಾರೆ.

ಭಾಗವತಾದಿ ಗ್ರಂಥಗಳಲ್ಲಿ ನಿರೂಪಿಸಲ್ಪಟ್ಟ ಖಗೋಳ, ಭೂಗೋಳ ವರ್ಣನೆಗಳು ಸರ್ವಜ್ಞರಾದ ಶ್ರೀ ವೇದವ್ಯಾಸರಿಂದ ರಚಿಸಲ್ಪಟ್ಟ ಕಾರಣ ಪ್ರಾಮಾಣಿಕವೇ. ಮುಕ್ತಸ್ಥಾನಕ್ಕೆ ನಾವು ಹೋಗಬೇಕಾದರೆ ಅಷ್ಟು ದೂರವಿರುವದು ಖಚಿತ. ಆದರೆ ಪರಮಾತ್ಮನು ಬರಬೇಕಾದರೆ ಅವನಿಗೆ ದೂರವಿಲ್ಲ. ತತ್ಕಾಲದಲ್ಲಿ ತತ್ಸ್ಥಳಗಳಿಗೆ ಬಂದು ಬಿಡುತ್ತಾನೆ. ಅವನು ದೇಶಾತೀತ, ಕಾಲಾತೀತ. ಪರಮಾತ್ಮನ ದೃಷ್ಟಿಯಿಂದ ವೈಕುಂಠ ಎಷ್ಟು ದೂರವೆಂದರೆ ದಾಸರಾಯರು ಹೇಳುತ್ತಾರೆ. ಆ ದೂರವನ್ನು ಯೋಜನೆಗಳಲ್ಲಿ ಅಳತೆ ಮಾಡಬೇಡಿರಿ. ಅನುಭವ ಕೇಳಿರಿ.

**ಒಂದೇ ಕೂಗಳತೆ|ವೈಕುಂಠ|**
**ಸಂದೇಹವಿಲ್ಲವೋ ಸಾಧು ಸಜ್ಜನರಿಗೆ||**

ಸ್ಮೃತಿಗಳನ್ನು ಪರಿಶೀಲಿಸಿ ಬಹು ದೃಷ್ಟಾಂತ ಸಂವಾದದಿಂದ ತತ್ವ ನಿಶ್ಚಯ ಜ್ಞಾನವನ್ನು ಪಡೆದ ಸಾಧುಸಜ್ಜನರಿಗೆ ವೈಕುಂಠದ ದೂರ **ಒಂದೇ ಕೂಗಳತೆ.**

ಹೌದೇ ದಾಸರೇ!

ನಾವು ಮುಂದೆ ಹೇಳತಕ್ಕ ಸ್ಮೃತಿ ದೃಷ್ಟಾಂತಗಳನ್ನು ವಿಮರ್ಶೆ ಮಾಡಿ ಶೋಧಿಸಿ ನೋಡಿರಿ. ನಿಮ್ಮ ಸಂದೇಹ ಕಾತರಗಳು ಮಾಯವಾಗುವವು.

**ಸರಸಿಯಲಿ ಆನೆ ಪೊರೆ ಎಂದು ಕರೆಯಲು|**
**ತ್ವರಿತದಿಂ ಬಂದೂ ಪೊರೆದೆ||**
**ನರಹರಿ ಕೃಷ್ಣ ಕಾಯೆಂದು ಚೀರಲು|**
**ತರಳಪ್ರಲ್ಹಾದಗೆ ಕಂಭದಿಂದಲಿ ಬಂದೇ||೧||**

ಗಜರಾಜ ಮತ್ತು ಪ್ರಹ್ಲಾದ ರಾಜ ಇಬ್ಬರೂ ಭಿನ್ನ ದೇಶಕಾಲಗಳಲ್ಲಿ ಭೂಲೋಕದಿಂದ ಆಪತ್ಕಾಲದಲ್ಲಿ ಶ್ರೀ ಹರಿಯನ್ನು ಕೂಗಿದರಷ್ಟೇ. (ಟೆಲಿಗ್ರಾಂ ಇಲ್ಲ, ವೈರ್ಲೆಸ್ ಇಲ್ಲ). ಆ ಕೂಗಿಗೇ ಬಂದೊದಗಿಗ ಶ್ರೀವಿಷ್ಣು. ಅಂದ ಮೇಲೆ ಒಂದೇ ಕೂಗಳತೆ ಅಲ್ಲವೇ. ಭೂಲೋಕದಿಂದ ವೈಕುಂಠ.

ಇವರಿಬ್ಬರೇನೇ ದಾಸರೇ ಕೂಗಿ ಪರಮಾತ್ಮನ್ನ ಕರಿದವರು? ಪರಮಾತ್ಮ ಆಕಸ್ಮಿಕ ಆ ಸ್ಥಳಕ್ಕೆ ಬರುವುದಕ್ಕೂ, ಅವರು ಕೂಗುವುದಕ್ಕೂ ಏಕಸಮಯವಾಗಿ ಕಾಕತಾಳಿಯ ನ್ಯಾಯದಂತಾಗಿರಲಿಕ್ಕಿಲ್ಲ ತಾನೇ?

ಅಂಥ ಸಂದೇಹ ನಿವಾರಣೆ ಅತಿ ಸುಲಭ. ಕೂಗಿ ಕರೆಸಿದ ಭಕ್ತರು ಲೆಕ್ಕ ವಿಲ್ಲದಷ್ಟು ಜನ ಇದ್ದಾರೆ. ನಾವು ಇಲ್ಲಿ ಇನ್ನೂ ಕೆಲವರ ವಿಷಯ ತಿಳಿಸುವೆವು. ಕೇಳಿರಿ.

**ಅಂಬರೀಷ ದ್ವಾದಶಿ ವ್ರತಮಾಡಲು|**
**ದೊಂಬಿಮಾಡಿದ ದೂರ್ವಾಸಮುನಿ||**
**ಕುಂಭಿಣಿ ಪತಿಕೃಷ್ಣ ಕಾಯೆಂದು ಕರೆಯಲು|**
**ಬೆಂಬತ್ತಿ ಚಕ್ರದಿಮುನಿ ಶಾಪವಕಳೆದ||೨||**

ಅಂಬರೀಷ ಮಹಾರಾಜನು ತಾನೊಬ್ಬನಲ್ಲ. ತನ್ನ ರಾಜ್ಯದಲ್ಲಿ ಎಂಟು ವರ್ಷದ ಮೇಲ್ಪಟ್ಟವರೆಲ್ಲರೂ ಏಕಾದಶೀ ವ್ರತ ಮಾಡಬೇಕೆಂದು ಶಾಸನ ಮಾಡಿದ್ದನು. ಅದೇನು ಧರ್ಮನಿಷ್ಠೆ! ದೂರ್ವಾಸರು ವ್ರತಭಂಗ ಮಾಡಾಲು ಬಂದರು. ದೂರ್ವಾಸ ಮುನಿಗಳನ್ನು ರಾಜನು ಗೌರವದಿಂದ ಬರಮಾಡಿಕೊಂಡು, ಸಂತೋಷ ವ್ಯಕ್ತಪಡಿಸಿ, ಪಾರಣೆಯ ಸಮಯ ಮೀರುವದೊಳಗೆ ಸ್ನಾನಮಾಡಿ ಸಿದ್ದರಾಗಿ ಬರಬೇಕೆಂದು ಪ್ರಾರ್ಥಿಸಲು, ದೂರ್ವಾಸ ಮುನಿಗಳು ಶಿಷ್ಯರೊಡನೆ ಸ್ನಾನಕ್ಕೆ ಹೋದರು. ಪಾರಣೆಯ ಸಮಯ ಮೀರುತ್ತ ಬಂತು, ದೂರ್ವಾಸರು ಬರಲೇ ಇಲ್ಲ. ರಾಜನು ವಿಧ್ಯುಕ್ತವಾದ ತೀರ್ಥಪಾರಣೆಯನ್ನು ಮಾಡಿದನು. ಅವನು ಮಾಡಿದ್ದೇನೂ ತಪ್ಪಿಲ್ಲ. **"ಶೃತಿ ಸ್ಮೃತಿ ಹರೇರಾಜ್ಞಾ"**, ಪ್ರಮಾಣಗಳನ್ನನುಸರಿಸಿ ತೀರ್ಥ ಪಾರಣೆ ಮಾಡಿದನು.

ಏಕ ಸಂದರ್ಭದಲ್ಲಿ ವಿರುದ್ಧ ವಿಚಾರದ್ವಯಗಳು ರಾಜನನ್ನು ಆವರಿಸಿದವು. ದೂರ್ವಾಸರ ಕೋಪತಾಪಗಳಿಗೆ ಹೆದರಿ, ಹರಿಯ ಆಜ್ಞೆ ಉಲ್ಲಂಘನೆಮಾಡಿ, ಪಾರಣೆಯನ್ನು ಬಿಡಬೇಕೇ? ಅಥವಾ ಹರಿಯ ಆಜ್ಞಾರೂಪವಾದ ಸ್ಮೃತಿ ಪ್ರಮಾಣಗಳನ್ನನುಸರಿಸಿ

ತೀರ್ಥ ಪಾರಣೆ ಮಾಡಿ ಹರಿ ಪ್ರೀತಿ ಪಡೆಯುವದು ಲೇಸೋ? ಏಕಾದಶೀ ವ್ರತವೇ ಹರಿ ಪ್ರೀತಿಗಾಗಿ, ದ್ವಾದಶಿ ಪಾರಣೆಯೂ ಅದರ ಅಂಗವೇ, ಎಂಬ ನಿಶ್ಚಯ ಬಲದಿಂದ ದ್ವಿತೀಯ ಪಕ್ಷವನ್ನವಲಂಬಿಸಿದ ರಾಜನು, ಶ್ರೀಹರಿ ಪ್ರೀತಿರಸ್ತು ಎಂದು ತೀರ್ಥಪಾರಣೆ ಮಾಡಿದನು.

ದೂರ್ವಾಸರು ಸ್ನಾನಮಾಡಿ ಬಂದರು. ತೀರ್ಥ ಪಾರಣೆಯಾದದ್ದು ತಿಳಿಯಿತು. ಶಾಪ ಕೊಟ್ಟೇ ಬಿಟ್ಟರು. ಜಟೆ ಅಪ್ಪಳಿಸಿದ ಕೂಡಲೆ ಬೆಂಕಿಯಂತೆ ಒಬ್ಬ ಕಾಲ ಪುರುಷನು ಬಂದು ರಾಜನನ್ನು ಬಾಧೆಪಡಿಸಲಾರಂಭಿಸಿದನು. ಅಂಬರೀಷ ಮಹಾರಾಜನು ತಾಳಲಾರದೆ ಶ್ರೀ ಕೃಷ್ಣನನ್ನು ಪ್ರಾರ್ಥಿಸಿದನು. ಕೂಗಿದನಷ್ಟೇ, ಏಕಾದಶಿ ಉಪವಾಸ ಮಾಡಿದ ರಾಜ ಇನ್ನೆಷ್ಟು ಗಟ್ಟಿಯಾಗಿ ಕೂಗಿಯಾನು. ತಕ್ಷಣವೇ ಶ್ರೀಹರಿ ಚಕ್ರಕ್ಕೆ ಆಜ್ಞೆ ಮಾಡಿದ. ಚಕ್ರ ದೂರ್ವಾಸರನ್ನು ಬೆನ್ನಟ್ಟಿತು, ಎಲ್ಲಿ ಹೋದರೂ ಬಿಡಲಿಲ್ಲ. ಶ್ರೀ ಕೃಷ್ಣನ ಹತ್ತಿರ ಹೋದರೂ ಪ್ರಯೋಜನವಾಗಲಿಲ್ಲ. ಅಂಬರೀಷನ ಬಳಿಗೆ ಹೋಗಿ ಕ್ಷಮೆ ಬೇಡೆಂದನು ಶ್ರೀ ಕೃಷ್ಣ. ಆ ಪ್ರಕಾರ ದೂರ್ವಾಸರು ಅಂಬರೀಷ ರಾಜನ ಹತ್ತಿರ ಬಂದು ಕ್ಷಮೆ ಕೇಳಿದರು. ಚಕ್ರವು ಸ್ವಸ್ಥಾನಕ್ಕೆ ಹೋಯಿತು. ನೀವೇ ನೋಡಿ, ಅಂಬರೀಷ ಮಹಾರಾಜ ಶ್ರೀ ಹರಿಯನ್ನು ಮರೆಹೊಕ್ಕ. ಶ್ರೀ ಕೃಷ್ಣಾ ಎಂದು ಕೂಗಿದನಷ್ಟೇ, ಇಲ್ಲಿ ಹರಿ ಬರಲಿಲ್ಲ, ಪರಿಹಾರ ಕಳಿಸಿದ. ಕೂಗು ಕೇಳಿದ್ದರಿಂದ ತಾನೇ ಪರಿಹಾರ. ಮೊದಲಿನಂತೆ ಕಾಕತಾಳಿಯ ನ್ಯಾಯದಂತಲ್ಲ.

ಇನ್ನೊಂದು ಬಹಳ ತೀವ್ರ ನೊಂದ ಸಂದರ್ಭವೆಂದರೆ, ದುಶ್ಶಾಸನ ಸಭೆಯಲ್ಲಿ, ಪಗಡೆ ಆಟದಲ್ಲಿ ಸೋತ ಪಾಂಡವರ ಸತಿಯನ್ನು ಅವಮಾನ ಮಾಡಲು ಸೀರೆ ಸೆಳೆಯಲುದ್ಯುಕ್ತನಾದ.

ದ್ರೌಪತಿದೇವಿಯು ಸಭೆಯಲ್ಲಿದ್ದವರನ್ನೆಲ್ಲ ಹೆಸರು ಹಿಡಿದು ಬಿಡುಗಡೆಗಾಗಿ ಅರಚಿದಳು. ಯಾರೂ ಬಿಡಿಸಲು ಮುಂದೆ ಬರಲಿಲ್ಲ. ಪತಿಗಳೈವರೂ ಬರುವಂತೆ ಇರಲಿಲ್ಲ. ಕೊನೆಗೆ ವಿಶೇಷವಾಗಿ ಶ್ರೀ ಕೃಷ್ಣನನ್ನೇ ಪ್ರರ್ಥಿಸಿದಳು. ಕೂಗಿದಳಷ್ಟೆ ಅಲ್ಲಿಂದಲೇ ಅಕ್ಷಯ ವಸ್ತ್ರವಿತ್ತು ಮಾನ ರಕ್ಷಣೆ ಮಾಡಿದನು ಸ್ವಾಮಿ. "**ಸೆಳೆಯುತ್ತಿದ್ದನು ಖಳನು ಬೆಳೆಯುತಿದ್ದವು ಸೀರೆ....**" ಎನ್ನುತ್ತಾರೆ ದಾಸರು ಉದಯರಾಗ ಒಂದರಲ್ಲಿ. ದ್ರೌಪತೀದೇವಿಯ ಕೂಗು ಕೇಳಿದ್ದರಿಂದಲೇ ಬಂತು ಅಕ್ಷಯವಸ್ತ್ರ. ಪರಿಹಾರ.

**ದ್ರುಪದರಾಜನ ಪುತ್ರಿ ಆಪತ್ತುಕಳೆಯೆನೆ|**
**ಕೃಪೆಯಿಂದ ಅಕ್ಷಯವಸ್ತ್ರ ವಿತ್ತೇ||**
**ಕೃಪಣ ವತ್ಸಲಸ್ವಾಮಿ ಪುರಂದರ ವಿಠಲನ|**
**ಗುಪಿತದಿ ನೆನವರ ವದನವೈಕುಂಠ||೩||**

ಗಜರಾಜ, ಪ್ರಹ್ಲಾದರಾಜ, ಅಂಬರೀಷ ರಾಜ, ದ್ರೌಪದಿದೇವಿಯರು ಕೂಗಿದರಷ್ಟೇ, ಪರಮಾತ್ಮ ಸಮಯಕ್ಕೆ ಒದಗಿದ್ದರಿಂದಲೂ ಮತ್ತು ವೈಯಕ್ತಿಕ ಬಾರದಿದ್ದಾಗ ಪರಿಹಾರ ಕಳಿಸಿದ್ದರಿಂದಲೂ, ಕೂಗು ಕೇಳಿಸಿದ್ದು ಖಚಿತ. ಕಾರ್ಯ ನೋಡಿ ಕಾರಣವನ್ನು ಊಹಿಸಿರಿ (ಇದೇ ಕಾರಣಾನುಮಾನವಲ್ಲವೇ, ಅದೆಷ್ಟು ದೃಷ್ಟಾಂತಗಳು !). ಇವರು ಕೂಗಿದಂತೆ ಕೂಗಿದರೆ ಪರಮಾತ್ಮನಿಗೆ ಕೇಳಿಸದೆ ಇರದು. ಅವನು ಬಂದೇ ಬರುವನು. ಈಗ ನೀವೇ ಹೇಳಿರಿ ಎಷ್ಟು ದೂರವಿರುವುದು ವೈಕುಂಠ?

ಕೊನೆಯದಾಗಿ ದಾಸರಾಯರು, ವಿಪರ್ಯಯ ಪರ್ಯವಸಾನವೆಂಬ ತರ್ಕ ಭಂಗಿಯಿಂದ ವ್ಯಾಪ್ತಿ ತೋರಿಸುತ್ತಾರೆ. ಯಾವುದು ವೈಕುಂಠವೋ ಅದು ಶ್ರೀ ಹರಿಯ

ಆವಾಸ ಸ್ಥಳ. ಯಾವ ಸಜ್ಜನರ ವದನದಲ್ಲಿ ನಾರಾಯಣ
ಇದ್ದನೋ ಅದೇ ವೈಕುಂಠ.

**"ಯತ್ರ ವೈಕುಂಠಃ ತತ್ರ ನಾರಾಯಣಃ ಅಸ್ತ್ಯೇವ|
ಯತ್ರ ನಾರಾಯಣಃ (ಸಜ್ಜನವದನೆ) ತತ್ರಾಪಿ
ವೈಕುಂಠಸ್ಯಾತ್"||**